<u>ಸಿವಿಲ್_ನ್ಯಾಯಾಧೀಶರು_ಮತ್ತು_ಹೆಚ್ಚುವರಿ_ಜೆ.ಎಂ.ಎಫ್.ಸಿ_ನ್ಯಾಯಾಲಯ,_ತರೀಕೆರೆ</u>

ಸಿ.ಸಿ.ಸಂಖ್ಯೆ.1604/2021

ಉಪಸ್ಥಿತರುಃ

ಶ್ರೀ ಸಂತೋಷ ಕುಮಾರ್ ಪಿ. ಎಸ್., ಎಂ.ಕಾಂ., ಎಲ್.ಎಲ್.ಬಿ.

ಪಿರ್ಯಾದುದಾರರುಃ ಅಜ್ಜಂಪುರ ಪೊಲೀಸ್ ಠಾಣೆ

– ವಿರುದ್ಧ –

ಆರೋಪಿತರಾದಃ

**1.** ಶ್ರೀ ಕುಮಾರಸ್ವಾಮಿ,
ಬಿನ್ ಶ್ರೀ ಓಂಕಾರಪ್ಪ,
ವಯಸ್ಸು 55 ವರ್ಷಗಳು,

**2.** ಶ್ರೀ ಬಾಲಚಂದ್ರ.ಕೆ,
ಬಿನ್ ಶ್ರೀ ಕುಮಾರಸ್ವಾಮಿ,
ವಯಸ್ಸು 26 ವರ್ಷ,

**3.** ಶ್ರೀ ನಾಗಭೂಷಣ.ಕೆ,
ಬಿನ್ ಶ್ರೀ ಕುಮಾರಸ್ವಾಮಿ,
ವಯಸ್ಸು 28 ವರ್ಷ,

ಎಲ್ಲರ ವಾಸಃ ಬಾಣೂರು ಗ್ರಾಮ,
ಅಜ್ಜಂಪುರ ತಾಲ್ಲೂಕು.

:: ದೋಷಾರೋಪಣೆ ::

ಸಂತೋಷ ಕುಮಾರ್ ಪಿ. ಎಸ್., ಎಂ.ಕಾಂ., ಎಲ್.ಎಲ್.ಬಿ., ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ತರೀಕೆರೆ ಆದ ನಾನು, ಈ ಮೂಲಕ ಆರೋಪಿಗಳಾದ ನಿಮ್ಮ ಮೇಲೆ ಮಾಡುವ ಆರೋಪಣೆ ಏನೆಂದರೆ-

ದಿನಾಂಕ 07.03.2021 ರಂದು ರಾತ್ರಿ 9.00 ಗಂಟೆ ಸಮಯದಲ್ಲಿ ಅಜ್ಜಂಪುರ ಪೋಲೀಸ್ ಠಾಣಾ ಸರಹದ್ದಿನ ಬಾಣೂರು ಗ್ರಾಮದ ಟಿ.ರಂಗಪ್ಪ ರವರ ವಾಸದ ಮನೆಯ ಮುಂದಿನ ನಿವೇಶವನದಲ್ಲಿ 1 ಮತ್ತು 2 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಸಾಕ್ಷಿ-1 ರವರಿಗೆ ಸೂಳೆಮಗನೆ, ಬೋಳಿಮಗನೆ ನೀನು ಬೋರ್ ಕೊರೆಸಿದ್ದರಿಂದ ನಮ್ಮ ಬೋರ್ ನಲ್ಲಿ ನೀರು ಕಡಿಮೆಯಾಗಿದೆ, ನೀನೇ ಮೊದಲು ಬೋರ್ ಕೊರೆಸಬೇಕಾಗಿತ್ತೆಂದು ಅವಾಚ್ಯ ಶಬ್ದಗಳಿಂದ ಬೈದು, ಭಾರತ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರ ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಸಮಾನ ಉದ್ದೇಶದಿಂದ ಮುಂದುವರಿದು, 1 ಮತ್ತು 2 ನೇ ಆರೋಪಿತರಾದ ನೀವು ಸಾಕ್ಷಿ-1 ರವರಿಗೆ ಕೈಯಿಂದ ಹೊಡೆದು ನೋವುಂಟು ಮಾಡಿ, ಭಾರತ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ರ ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಸಮಾನ ಉದ್ದೇಶದಿಂದ ಮುಂದುವರಿದು, 1 ಮತ್ತು 2 ನೇ ಆರೋಪಿತರಾದ ನೀವು ಸಾಕ್ಷಿ-1 ರವರಿಗೆ ಕೊಲೆ ಬೆದರಿಕೆ ಹಾಕಿ, ಭಾರತ ದಂಡ ಸಂಹಿತೆ ಕಲಂ 506 ಸಹವಾಚ ಕಲಂ 34 ರ ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಇದೇ ವಿಚಾರವಾಗಿ ಪುನಃ ದಿನಾಂಕ 08.03.2021 ರಂದು ರಾತ್ರಿ 7.00 ಗಂಟೆ ಸಮಯದಲ್ಲಿ ಅಜ್ಜಂಪುರ ಪೋಲೀಸ್ ಠಾಣಾ ಸರಹದ್ದಿನ ಬಾಣೂರು ಗ್ರಾಮದಲ್ಲಿ 3 ನೇ ಆರೋಪಿಯಾದ ನೀವು ಸಾಕ್ಷಿ-1 ರವರಿಗೆ ತಮ್ಮ ಬೋರ್ ವೆಲ್ ಬಳಿ ನೀವು ಏಕೆ ಕೊರೆಸಿದ್ದೀರ ನಮ್ಮ ಬೋರಿನಲ್ಲಿ ನೀರು ಕಡಿಮೆಯಾಗುತ್ತೆ ಸೂಳೇಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು, ಭಾರತ ದಂಡ ಸಂಹಿತೆ ಕಲಂ 504 ರ ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 3 ನೇ ಆರೋಪಿಯಾದ ನೀವು ಸಾಕ್ಷಿ-1 ರವರಿಗೆ ಸ್ಕ್ರೂ ಡ್ರೈವರ್ ನಿಂದ ಹೊಟ್ಟೆಗೆ ಹೊಡೆದು ನೋವುಂಟು ಮಾಡಿ, ಭಾರತ ದಂಡ ಸಂಹಿತೆ ಕಲಂ 324 ರ ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 3 ನೇ ಆರೋಪಿಯಾದ ನೀವು ಸಾಕ್ಷಿ-1 ರವರಿಗೆ ಕೈಯಿಂದ ಮೈಕೈಗೆ ಗುದ್ದಿ ಸಾಮಾನ್ಯ ಸ್ವರೂಪದ ನೋವುಂಟು ಮಾಡಿ, ಭಾರತ ದಂಡ ಸಂಹಿತೆ ಕಲಂ 323 ರ ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 3 ನೇ ಆರೋಪಿಯಾದ ನೀವು ಸಾಕ್ಷಿ-1 ರವರಿಗೆ ಕೊಲೆ ಬೆದರಿಕೆ ಹಾಕಿ, ಭಾರತ ದಂಡ ಸಂಹಿತೆ ಕಲಂ 506 ರ ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಸದರೀ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರಿ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ16.09.2022 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಸಹಿ/-
ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಜೆಎಂಎಫ್ ಸಿ , ತರೀಕೆರೆ